ಕಣ್ಣು ತೆರೆದರೂ ಕೂಡಲೇ ಅವಳಿಗೆ ತಾನೆಲ್ಲಿದ್ದೇನೆಂಬ ಅರಿವಾಗಲಿಲ್ಲ. ಕ್ಷಣಕಾಲ ಸುತ್ತಮುತ್ತ ಕಣ್ಣು ಹಾಯಿಸಿದ ಮೇಲೆ ತನ್ನ ಮನೆಯಲ್ಲೇ ತಾನಿರುವುದನ್ನು ಕಂಡು ಸಮಾಧಾನವಾಯಿತವಳಿಗೆ. ಅಬ್ಬಾ ಎಂಥ ದರಿದ್ರ ಕನಸು. ನಿಧಾನಕ್ಕೆ ಕನಸು ನೆನಪಿಗೆ ಬಂದೊಡನೆಯೇ ಅವಳು “ಲಾ ಹೌಲ್ ವಲಾ ಖುವ್ವತ ಇಲ್ಲಾಬಿಲ್ಲಾ ಹಿಲ್ಲಲಿ ಉಲ್ಲಜೀಮ್” (ಅಲ್ಲಾಹನ ಹೊರತು ಬೇರೆ ಯಾರೂ ಬಲಾಢ್ಯರಿಲ್ಲ) ಎಂದು ಕುರ್‌ಆನ್‌ನ ವಾಕ್ಯವೊಂದನ್ನು ಪುನರಾವರ್ತಿಸುತ್ತಾ ಹಾಗೆಯೇ ಕೆಲಕಾಲ ನಿಶ್ಚಲವಾಗಿ ಮಲಗಿದ್ದಳು. ‘ಓ... ಇನ್ನು ಇಫ್ತಾರಿಯ (ಉಪವಾಸ ಬಿಡುವ ಹೊತ್ತಿನ ಉಪಹಾರದ) ಸಿದ್ಧತೆಗೆ ತಡವಾಗುತ್ತೆ’ ಎಂದು ಬಲಮಗ್ಗುಲಲಿಗೆ ಹೊರಳಿ, ಇನ್ನೇನು ಎದ್ದೇಳಬೇಕು ಎಂದು ಕೈಊರುವಷ್ಟರಲ್ಲಿ ಅದೇ! ಅದೇ! ದುರ್ವಾಸನೆ ಚೂರೇ ಚೂರು ಅವಳ ಮೂಗಿಗೆ ಅಡರಿತು. ಮತ್ತು ಆ ದುರ್ವಾಸನೆಯು ವ್ಯಾಪಿಸುತ್ತಾ ತನ್ನ ಇಡೀ ಅಸ್ತಿತ್ವವನ್ನೇ ಕಬಳಿಸಿದಂತೆ ಅವಳು ಅಸ್ವಸ್ಥಳಾದಳು.

‘ಇರಲಿಕ್ಕಿಲ್ಲ... ಕನಸಿನ ದುರ್ವಾಸನೆ ಎಚ್ಚರವಾದಾಗ ಎಲ್ಲಿರುತ್ತೆ’ ಎಂದು ತನಗೆ ತಾನೇ ಸಮಾಧಾನ ಮಾಡಿಕೊಳ್ಳುವಷ್ಟರಲ್ಲಿ ಇನ್ನೊಮ್ಮೆ ಸಹಿಸಲಸಾಧ್ಯವಾದ ದುರ್ನಾತದ ಅಲೆಯೊಂದು ಮೂಡಿಬಂದಿತು. ‘ಛೇ! ಇದೆಲ್ಲಿಂದ ಬರ್ತಿದೆ...’ ಎಂದು ಅವಳೊಮ್ಮೆ ತನ್ನ ಸೀರೆಯನ್ನು ಮೂಸಿ ನೋಡಿಕೊಂಡಳು. ದಿವಾನ್‌ಕಾಟ್‌ನ ದಿಂಬುಗಳನ್ನೆಲ್ಲಾ ಬದಿಗೆ ಸರಿಸಿ, ದಿವಾನ್ ಮೇಲೆ ಹರಡಿದ್ದ ಕರ್ಲಾನ್ ಹಾಸಿಗೆಯನ್ನು ಬುಡಮೇಲು ಮಾಡಿದಳು. ಅಲ್ಲೆಲ್ಲೂ ಆ ದರಿದ್ರ ವಾಸನೆಯ ಮೂಲ ಕಾಣಲಿಲ್ಲ. ಆದರೆ, ತೆಳುವಾಗಿ ಆ ದುರ್ವಾಸನೆ ಮತ್ತೆ ಮತ್ತೆ ಪಸರಿಸಲಾರಂಭಿಸಿತು. ಅದೆಂತಹ ವಾಸನೆ ಎಂಬುದು ಆಕೆಗೆ ತಿಳಿಯಲಿಲ್ಲ. ಆದರೂ ಆಕೆ ತಟ್ಟನೆ ಎದ್ದಳು ಮತ್ತು ಅದರ ಮೂಲವನ್ನು ಹುಡುಕುತ್ತಾ ಆಕೆ ಕಾರ್ಯೋನ್ಮುಖಿಯಾದಳು.

ಸಾಕಷ್ಟು ದೊಡ್ಡದಾದ ಮನೆ ಆಕೆಯದು. ಅನೇಕ ಬೆಡ್‌ರೂಮ್‌ಗಳು ಅಟ್ಯಾಚ್ಡ್ ಬಾತ್‌ರೂಮ್‌ಗಳೊಡನೆ ಇದ್ದವು. ಅವಳು ಸರಸರನೆ ಮಹಡಿ ಮೆಟ್ಟಿಲೇರಿದಳು. ಅವಳ ಸೊಸೆಯಂದಿರಿಬ್ಬರೂ ಮೊದಲನೇ ಅಂತಸ್ತಿನಲ್ಲಿ ಮಲಗುತ್ತಿದ್ದುದು. ಅವರ ಮಲಗುವ ಕೋಣೆಗಳಿಗೆ ಹೋಗಿ ಬಾತ್‌ರೂಮನ ಬಾಗಿಲುಗಳನ್ನ ತೆರೆದು ಪರೀಕ್ಷಿಸಿದಳು. ಊಹೂಂ... ಅಂತಹ ವಾಸನೆ ಏನಿಲ್ಲ. ಮತ್ತೆ ಕೆಳಗಿಳಿದು ಬಂದಳು. ತಮ್ಮ ಮಲಗುವ ಕೋಣೆ... ಅಲ್ಲಿಯೂ ಏನಿಲ್ಲ. ಮುಂಭಾಗದ ಕೈದೋಟದಲ್ಲಿ ಈ ಹಾಳು ಬೆಕ್ಕೇನಾದರೂ ಮೀನನ್ನೋ ಇಲಿಯನ್ನೋ ತಂದು ಹಾಕಿರಬೇಕು. ಅಲ್ಲಂತೂ ಯಾವ ದುರ್ವಾಸನೆಯೂ ಇಲ್ಲ. ಅವಳು ಮತ್ತೆ ಒಂದೆರಡು ಸಾರಿ ಮೇಲೆ ಹೋಗಿ ಸುತ್ತಿ ಬಂದಳು. ‘‘ಓ ಅಲ್ಲಾ... ಎಲ್ಲಿಯೂ ಏನೂ ಕಾಣ್ತಾ ಇಲ್ಲಾ... ರಂಜಾನ್‌ನಲ್ಲಿ ಉಪವಾಸವಿದ್ದು ನನಗಿದ್ಯಾವ ಕರ್ಮ...” ಎಂದು ಗೊಣಗುತ್ತಾ ಮೆಟ್ಟಲಿಳಿದಾಗ ಮತ್ತೊಮ್ಮೆ ‘ಭಗ್’ ಎಂದು ಮೂಗಿಗಡರಿತು... ದುರ್ವಾಸನೆಯ ಸೆಲೆ.

ಅಯಾಚಿತವಾಗಿ ಅವಳು ಮನೆಯ ಹಿಂಬಾಗಿಲನ್ನು ತೆರೆದು ಹಿಂಬಂದಿಯ ಅಂಗಳಕ್ಕೆ ಕಾಲಿಟ್ಟಳು. ಅಲ್ಲಿ ಸ್ಪಷ್ಟವಾಗಿ ಢಾಳಾಗಿ ದುರ್ವಾಸನೆ ತನ್ನ ಅಸ್ತಿತ್ವವನ್ನು ಸಾಬೀತುಗೊಳಿಸುತ್ತಿತ್ತು. ಒಮ್ಮೆಲೆ ಅವಳ ನೋಟ ಮನೆಯ ಕೆಲಸಗಾರರಿಗೆಂದು ಕಟ್ಟಿಸಿದ್ದ ಮೂಲೆಯಲ್ಲಿದ್ದ ಶೌಚಾಲಯದತ್ತ ಹೊರಳಿತು. ‘ದರಿದ್ರದವ್ರು... ಯಾರೋ ಕ್ಲೀನ್ ಮಾಡಿಲ್ಲಾ...’ ಎಂದು ಮನದಲ್ಲಿಯೇ ಶಪಿಸುತ್ತಾ ಅಡಿಗೆ ಮನೆಯತ್ತ ಹಣಿಕಿದಳು. ಅವರನ್ನು ಬಯ್ಯಬೇಕೆಂದುಕೊಂಡು ಅಡಿಗೆ ಮನೆಗೆ ವೇಗವಾಗಿ ಬಂದವಳೇ, ಅಡಿಗೆಯಾಕೆ ಬೀಮಾಳನ್ನು ಆಕೆಯ ಸಹಾಯಕಿ ಅದೆಂಥದೋ ಹಾಳು ಹೆಸರಿನವಳನ್ನೂ ಕಂಡಕೂಡಲೇ ಕೋಪವನ್ನು ತಹಬಂದಿಗೆ ತೆಗೆದುಕೊಂಡಳು.

‘ಹಾಯ್! ಅಲ್ಲಾ ಎಂಥಾ ಅಚಾತುರ್ಯವಾಗಿಬಿಡುತ್ತಿತ್ತು . ಅವರಿಬ್ಬರೂ ಉಪವಾಸಿಗರೇ. ಅವರ ಮೇಲೆ ರೇಗಿ ಆಡಬಾರದ್ದನ್ನು ಅಂದು ನನ್ನ ನಾಲಿಗೆಯ ಉಪವಾಸವನ್ನು ಕಳೆದುಕೊಳ್ಳುತ್ತಿದ್ದೆನಲ್ಲಾ’